# ವಿವಿಧತೆಯಲ್ಲಿ ಏಕತೆ

ಒಂದು ಶಾಲೆಯಲ್ಲಿ ಭೂಗೋಲದ ತರಗತಿ ನಡೆಯುತ್ತಿತ್ತು. ಮಕ್ಕಳಿಗೆ ಪ್ರಪಂಚದ ಭೂಪಟದ ಪರಿಚಯ ಎಷ್ಟರ ಮಟ್ಟಿಗಿದೆ ಎಂದು ಪರೀಕ್ಷಿಸುವ ಸಲುವಾಗಿ ಅಧ್ಯಾಪಕರು ಪ್ರಪಂಚದ ನಕ್ಷೆಯನ್ನು ಹಲವು ತುಂಡುಗಳಾಗಿ ಕತ್ತರಿಸಿ, ಮತ್ತೆ ಜೋಡಿಸುವಂತೆ ಹೇಳಿದರು. ಒಬ್ಬ ವಿದ್ಯಾರ್ಥಿ ಬಹಳ ಬೇಗ ಆ ತುಂಡುಗಳನ್ನು ಸರಿಯಾಗಿ ಜೋಡಿಸಿ, ಭೂಪಟವನ್ನು ಮೊದಲಿನ ಸ್ಥಿತಿಗೆ ತಂದ. 'ನಿನಗೆ ಇಷ್ಟು ಬೇಗ ಜೋಡಿಸಲು ಹೇಗೆ ಸಾಧ್ಯವಾಯಿತು?' ಎಂದು ಅಧ್ಯಾಪಕರು ಕೇಳಿದಾಗ ಹುಡುಗ ನಕ್ಷೆಯ ಹಿಂಭಾಗವನ್ನು ತೋರಿಸಿದ. ಅಲ್ಲಿ ಮನುಷ್ಯನೊಬ್ಬನ ಚಿತ್ರವಿತ್ತು, ಆ ವಿದ್ಯಾರ್ಥಿ ಮನುಷ್ಯನ ಚಿತ್ರದ ಭಾಗಗಳನ್ನು ಕ್ರಮವಾಗಿ ಜೋಡಿಸಿದ್ದ. ಇದರಿಂದಾಗಿ ಪ್ರಪಂಚದ ಭೂಪಟವೂ ವ್ಯವಸ್ಥಿತವಾಗಿ ಜೋಡಿಸಲ್ಪಟ್ಟಿತ್ತು.

ಮನುಷ್ಯ ಸರಿಯಾದಾಗ 'ಭೂಪಟ'ವೂ ಸರಿಯಾಗುತ್ತದೆ ಎಂಬ ಸತ್ಯವನ್ನು ಈ ಕಥೆ ಧ್ವನಿಸುತ್ತದೆಯಲ್ಲವೆ? ಮನುಷ್ಯ ಮನುಷ್ಯರ ನಡುವೆ ವಿರಸ ಕಾಣಿಸಿಕೊಂಡಾಗ ಸಹಜವಾಗಿಯೇ ಮನುಷ್ಯ ಪ್ರಪಂಚದಲ್ಲಿ ವಿಘಟನೆ ಉಂಟಾಗುತ್ತದೆ. ಇಂಥ ವಿಘಟನೆಗೆ ಜಾತಿ, ಮತ, ಧರ್ಮ, ಆರ್ಥಿಕ ಅಸಮಾನತೆ, ರಾಜಕೀಯ ಸಮಸ್ಯೆ– ಹೀಗೆ ಹಲವು ಸಂಗತಿಗಳು ಕಾರಣವಾಗಿರಬಹುದು. ಯಾವುದೇ ಕಾರಣವಿದ್ದರೂ ಅದರ ಪರಿಣಾಮದಿಂದಾಗುವ ಸರಪಳಿ ಕ್ರಿಯೆಯಿಂದಾಗಿ ರಾಷ್ಟ್ರೀಯ, ಅಂತರರಾಷ್ಟ್ರೀಯ ವಲಯಗಳಲ್ಲಿ ಪ್ರಕ್ಷುಬ್ಧತೆ ಕಾಣಿಸಿಕೊಳ್ಳುತ್ತದೆ. ಅದು ಹಿಂಸೆ, ರಕ್ತಪಾತ, ಅಮಾಯಕರ ಹತ್ಯೆ– ಇತ್ಯಾದಿಗಳಲ್ಲಿ ಪರ್ಯವಸಾನಗೊಂಡು ಮನುಷ್ಯ ಜಗತ್ತು ತಲ್ಲಣಿಸುತ್ತದೆ. ಇತಿಹಾಸದುದ್ದಕ್ಕೂ ಇಂಥವು ಮರುಕಳಿಸುತ್ತಿದ್ದರೂ, ಇತಿಹಾಸದಿಂದ ಮನುಷ್ಯ ಪಾಠ ಕಲಿತಿಲ್ಲವೆಂಬುದಕ್ಕೆ ಇತ್ತೀಚೆಗೆ ಪೇಷಾವರದಲ್ಲಿ ವಿಜೃಂಭಿಸಿದ ಕ್ರೌರ್ಯವೇ ಸಾಕ್ಷಿ.

ಸಹ ಜೀವಿಗಳ ಅಭಿಪ್ರಾಯ ಅನಿಸಿಕೆಗಳನ್ನು ಗೌರವಿಸಿ, ಅವರ ಅಸ್ತಿತ್ವಕ್ಕೆ ಅವಕಾಶ ಕೊಡುವ ಸಹ್ಷುತೆಯೊಂದೇ ಇಂಥ ಪ್ರಕ್ಷುಬ್ಧತೆ ಹಾಗೂ ಹಿಂಸಾರತಿಯನ್ನು ನಿಯಂತ್ರಿಸುವ ಬಹುದೊಡ್ಡ ಸಾಧನ. ಕೂಡಿ ಬಾಳಿ, ಕೂಡಿ ಉಂಡು, ಕೂಡಿ ಕೆಲಸ ಮಾಡಿ, 'ಎಲ್ಲರೊಳಗೊಂದಾಗಿ' ಸಹನೆಯಿಂದ ಬದುಕ ಬೇಕೆನ್ನುವ ಹಂಬಲ ಸಮಷ್ಟಿಯಲ್ಲಿ ಮೂಡಿಬಂದಾಗ ಮಾತ್ರ ಮನುಷ್ಯ ಜಗತ್ತಿನಲ್ಲಿ ಹುಟ್ಟಿಕೊಳ್ಳುವ ಪ್ರಕ್ಷುಬ್ಧತೆ ಬಹಳ ಬೇಗ ಶಮನಗೊಳ್ಳುತ್ತದೆ.

ಮನುಷ್ಯ ಮನುಷ್ಯರ ನಡುವಣ ವ್ಯತ್ಯಾಸ ಅಸಹಜವೇನಲ್ಲ. ಅದರಿಂದಾಗುವ ವೈವಿಧ್ಯ ಅಸಹನೀಯವೂ ಅಲ್ಲ. ನೈಸರ್ಗಿಕ ವೈವಿಧ್ಯ, ಅಭಿಪ್ರಾಯ ವೈವಿಧ್ಯ, ಅಭಿರುಚಿ ವೈವಿಧ್ಯ– ಇತ್ಯಾದಿಗಳೆಲ್ಲವೂ ಬದುಕಿನ ಸ್ವಾರಸ್ಯವನ್ನು ಹೆಚ್ಚಿಸಬೇಕೇ ಹೊರತು, ವಿರಸಕ್ಕೆ ಕಾರಣವಾಗಬಾರದು, ನಮ್ಮ ಮತ, ನಮ್ಮ ಧರ್ಮ, ನಮ್ಮ ರಾಷ್ಟ್ರ ಎಂಬ ಅಭಿಮಾನ ಎಲ್ಲರಿಗೂ ಇರಬೇಕು, ನಿಜ. ಆದರೆ ನಮ್ಮದೇ ಶ್ರೇಷ್ಠ, ಉಳಿದವರದು ನಿಕೃಷ್ಟ ಎಂಬ ಮನೋಭಾವ ಘರ್ಷಣೆಗೆ ದಾರಿ ಮಾಡಿಕೊಡುತ್ತದೆ. ವೈವಿಧ್ಯದಲ್ಲಿ ಸೌಂದರ್ಯವನ್ನು ಕಾಣುವ ಮನಸ್ಸು ನಮ್ಮಲ್ಲಿಲ್ಲದಾಗ ಅಸಹನೆ ಪುಟಿಯುತ್ತದೆ. ಭಾರತೀಯ ಸಂಸ್ಕೃತಿ 'ವಿವಿಧತೆಯಲ್ಲಿ ಏಕತೆ' (Unity in diversity)ಯ ತತ್ತ್ವವನ್ನು ಗೌರವಿಸುತ್ತಿರುವುದೇ ಅದರ ವೈಶಿಷ್ಟ್ಯವೆಂದು ನೆಹರೂ ಅವರು ಗುರುತಿಸಿರುವುದನ್ನು ನೆನಪಿಸಿಕೊಳ್ಳಬಹುದು, ಭಾರತೀಯ ಸಂಸ್ಕೃತಿಯ ಈ ಮೌಲಿಕ ಲಕ್ಷಣಕ್ಕೆ ಕಾರಣವಾಗಿರುವುದು ಭಾರತೀಯರ ಪರಧರ್ಮ ಸಹಿಷ್ಣುತೆ; 'ಉದಾರ ಚರಿತಾ ನಾಂತು ವಸುಧೈವ ಕುಟುಂಬಕಂ' (ಉದಾರ ಚರಿತೆಯುಳ್ಳವರಿಗೆ ಈ ವಿಶ್ವವೆಲ್ಲವೂ ಕುಟುಂಬ) ಎಂಬ ವಿಶಾಲ ಮನೋಭಾವ! ಇತರರ ಅಭಿಪ್ರಾಯ, ಧರ್ಮಗಳನ್ನು ಗೌರವಿಸಿ, ಅವರೊಂದಿಗೆ ಸೌಮನಸ್ಯದಿಂದ ವರ್ತಿಸುವ ಸಹಿಷ್ಣುತೆ ಜೀವನ ಪ್ರೀತಿಯನ್ನು ಹೆಚ್ಚಿಸುತ್ತದೆ. 'ಕಸವರ ಮೆಂಬುದು ನೆರೆ ಸೈರಿಸಲಾರ್ಪೊಡೆ ಪರ ವಿಚಾರಮುಮಂ, ಪರ ಧರ್ಮಮುಮಂ' (ಪರರ ವಿಚಾರವನ್ನೂ, ಪರ ಧರ್ಮವನ್ನೂ ಸಹಿಸುವ ಮನಸ್ಸಿನ ಗುಣವೇ ನಿಜವಾದ ಸಂಪತ್ತು) ಎನ್ನುತ್ತಾನೆ ಕನ್ನಡದ ಕವಿಯೊಬ್ಬ. ಭಾರತೀಯರಲ್ಲಿ ಇಂಥ ಸಹಿಷ್ಣುತೆಯ ಸಂಪತ್ತು ಧಾರಾಳವಾಗಿದ್ದುದರಿಂದಲೇ ಭಾರತೀಯ ಸಂಸ್ಕೃತಿ 'ವೈವಿಧ್ಯದಲ್ಲಿ ಏಕತೆ'ಯನ್ನು ಕಾಪಾಡಿಕೊಂಡು ಬರಲು ಸಾಧ್ಯವಾದುದು.

ಆದರೆ ಇತ್ತೀಚಿನ ದಿನಗಳಲ್ಲಿ ನಮ್ಮ ಪರಂಪರೆಯಲ್ಲಿ ಸಹಜವಾಗಿ ಹರಿದು ಬಂದಿರುವ ಸಹಿಷ್ಣುತೆ, ಉದಾರ ದೃಷ್ಟಿಗಳಲ್ಲಿ ತೀವ್ರ ವ್ಯತ್ಯಯ ಕಾಣಿಸಿಕೊಳ್ಳುತ್ತಿರುವುದನ್ನು ದೈನಂದಿನ ಘಟನೆಗಳು ಸಾರಿ ಹೇಳುತ್ತಿವೆ. ಒಂದು ಕಡೆ ಶುಷ್ಕ ಬೌದ್ಧಿಕತೆ, ಇನ್ನೊಂದು ಕಡೆ ಅವಿಚಾರಿತ ಹುಂಬತನ– ಇವುಗಳಿಂದಾಗಿ ಮನುಷ್ಯ ಜಗತ್ತು ತತ್ತರಿಸುವಂತಾಗಿದೆ. 'ಉತ್ತಮರಿಗಿಲ್ಲ ದೃಢ ನಂಬಿಕೆ, ನಿಕೃಷ್ಟರಿಗೆ ತೀವ್ರ ಭಾವೋನ್ಮಾದ ಪರತೆ' ಎಂಬ ಯೇಟ್ಸ್ ಕವಿಯ ಮಾತುಗಳು ಸತ್ಯವೆನ್ನಿಸುತ್ತಿವೆ!

■ **ವೈನತೇಯ**

## ಮಾತೇ ಮುತ್ತು

★ ದುರ್ಬಲರು ಎಂದೂ ಕ್ಷಮಿಸುವುದಿಲ್ಲ; ಕ್ಷಮೆ ಎನ್ನುವುದು ಯಾವತ್ತೂ ಬಲಶಾಲಿಗಳ ಕೊಡುಗೆ.

–ಮಹಾತ್ಮ ಗಾಂಧೀಜಿ

★ ವ್ಯಕ್ತಿಯೊಬ್ಬನನ್ನು ದಮನಿಸುವುದರಿಂದ ಅವನ ಆಲೋಚನೆಗಳನ್ನು ಕೊಲ್ಲಲು ಸಾಧ್ಯವಿಲ್ಲ.

–ಭಗತ್‌ಸಿಂಗ್

★ ನಾವು ದೇವರನ್ನು ಹುಡುಕಬೇಕು. ಅವನು ಗದ್ದಲ ಮತ್ತು ಧಾವಂತಗಳಲ್ಲಿ ಸಿಗುವುದಿಲ್ಲ. ದೇವರು ಮೌನದ ಗೆಳೆಯ. ಗಿಡ, ಮರ, ಬಳ್ಳಿಗಳು ಹೇಗೆ ಮೌನವಾಗಿ ಬೆಳೆಯುತ್ತಿವೆ ನೋಡಿ! ಸೂರ್ಯ, ಚಂದ್ರ, ಗ್ರಹ, ನಕ್ಷತ್ರಗಳೂ ಮೌನದಲ್ಲೇ ಚಲಿಸುತ್ತವೆ. ಆತ್ಮಗಳನ್ನು ಸ್ಪರ್ಶಿಸಲು ಮೌನ ಬೇಕು.

–ಮದರ್ ತೆರೆಸಾ

★ ದಡದ ಮೇಲಿನ ನೋಟವನ್ನು ಕಳೆದುಕೊಳ್ಳುವ ಧೈರ್ಯ ಇಲ್ಲದವನು ಸಮುದ್ರವನ್ನು ದಾಟಲಾಗುವುದಿಲ್ಲ.

–ರಾಷ್ಟ್ರಕವಿ ಅಲ್ಲಾಮಾ ಇಕ್ಬಾಲ್

★ ಯಶಸ್ಸು ಎನ್ನುವುದು ದುರ್ಬಲ ಶಿಕ್ಷಕ. ಅದು ಬುದ್ಧಿವಂತರನ್ನು, ನೀವು ಯಾವತ್ತೂ ಸೋಲಲಾರಿರಿ ಎಂದು ಭಾವಿಸುವಂತೆ ಪುಸಲಾಯಿಸುತ್ತದೆ.

–ಬಿಲ್ ಗೇಟ್ಸ್

★ ಸುತ್ತಲೂ ಎಲ್ಲೆಲ್ಲೂ ನೀರೇ ತುಂಬಿರುವಾಗ, ಬಾಯಾರಿಕೆಯಿಂದ ಬಳಲಿ ಸಾಯುತ್ತಿದ್ದೇನೆ ಎಂದು ಕೂಗುವವನು ಶತಮೂರ್ಖ.

–ಸಂತ ಕಬೀರ

★ ಎಲ್ಲ ಆಲೋಚನೆಗಳಿಗೂ ಮನಸ್ಸನ್ನು ತೆರೆದಿಡಿ; ಕೇವಲ ಒಂದು ಆಲೋಚನೆಗೇ ಸೀಮಿತರಾಗಬೇಡಿ. ಬುದ್ಧಿಜೀವಿಯಾಗಲು ಅದೊಂದು ಮುಖ್ಯ ದಾರಿ.

–ಜಾನ್ ಕೀಟ್ಸ್

★ ಜೀವ ಎಂದರೆ ಜೀವವೇ– ಬೆಕ್ಕು, ನಾಯಿ ಅಥವಾ ಮನುಷ್ಯನದ್ದೇ ಆಗಿರಲಿ. ಜೀವದ ನಡುವೆ ವ್ಯತ್ಯಾಸವಿಲ್ಲ. ಮನುಷ್ಯ ತನ್ನ ಲಾಭಕ್ಕಾಗಿ ಕೆಲವು ವ್ಯತ್ಯಾಸಗಳನ್ನು ಗುರುತಿಸುತ್ತಾನೆ.

–ಅರಬಿಂದೊ ಘೋಷ್

★ ಪ್ರೇಮಕ್ಕೆ ಸಾವು ಮತ್ತು ಬದುಕಿನ ನಡುವಣ ವ್ಯತ್ಯಾಸ ಗೊತ್ತಿಲ್ಲ. ನಿಮ್ಮನ್ನು ಬದುಕಿಸಬಲ್ಲ ಕಾರಣವೇ ಸಾವಿನತ್ತವೂ ಕರೆದೊಯ್ಯಬಹುದು.

–ಮಿರ್ಜಾ ಘಾಲಿಬ್

★ ಯಾವತ್ತೂ ಪ್ರಯತ್ನಿಸಿಲ್ಲ, ಯಾವತ್ತೂ ಸೋತಿಲ್ಲವೆ? ಪರವಾಗಿಲ್ಲ. ಮತ್ತೆ ಮತ್ತೆ ಪ್ರಯತ್ನಿಸಿ, ಸೋಲನ್ನೂ ಉತ್ತಮಪಡಿಸಿಕೊಳ್ಳಿ.

–ಸ್ಯಾಮುವೆಲ್ ಬಕೆಟ್

★ ನಮಗೆ ಗೊತ್ತಿರುವ ನೈಜ ವೈರಿಗಳೇ ಸಾಕಷ್ಟಿರುವಾಗ, ಇನ್ನಷ್ಟು ಕಾಲ್ಪನಿಕ ವೈರಿಗಳನ್ನು ಸೃಷ್ಟಿಸಬೇಡಿ.

–ಆಲಿವರ್ ಗೋಲ್ಡ್‌ಸ್ಮಿತ್

★ ನಮ್ಮ ಅತ್ಯಂತ ಮಧುರ ಕವಿತೆಗಳು ಯಾವುವೆಂದರೆ, ಅತ್ಯಂತ ವಿಷಾದಮಯ ಸಂಗತಿಗಳನ್ನು ಹೇಳುವಂತಹದ್ದು.

–ಪಿ.ಬಿ.ಶೆಲ್ಲಿ

★ ನಾವು ಏನಾಗಿದ್ದೇವೆ ಎನ್ನುವುದು ಗೊತ್ತಿದೆ. ಏನಾಗಬಹುದು ಎನ್ನುವುದು ಗೊತ್ತಿರುವುದಿಲ್ಲ.

–ವಿಲಿಯಂ ಷೇಕ್ಸ್‌ಪಿಯರ್